ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ,
ನಂ.1 ವಿಶೇಷ ಉಪ-ವಿಭಾಗ,
ನಜರ್‌ಬಾದ್, ಮೈಸೂರು-570010
Ph: 0821- 2421002
E-mail: aeeno1pwdsplmys@gmail.com

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

Office of the Assistant Executive Engineer,
Public Works Department,
No.1 Special Sub Division,
Nazarabad, Mysore-570010
Ph: 0821- 2421002
E-mail: aeeno1pwdsplmys@gmail.com

ಸಂಖ್ಯೆ/ಸಕಾಇಂ/ಲೋ.ಇ/ನಂ.1/ವಿಉವಿ/ಮೈ/ಸ.ಇಂ-1/2026-27/607
05/09/2026

ರವರಿಗೆ,

ಕಾರ್ಯದರ್ಶಿಗಳು,
ಕಮಲ ರಂಜಿತ್ ಎಜುಕೇಷನ್ ಸೊಸೈಟಿ (ರಿ),
The Acme School,
ಸಿ.ಎ/1, ರೋಟರಿ ಸುದರ್ಶಿನಿ ಕಟ್ಟಡ,
ನಿವೇದಿತ ನಗರ,
ಮೈಸೂರು-570022.

ಮಾನ್ಯರೇ,

ವಿಷಯ:- ಮೈಸೂರಿನ ನಿವೇದಿತ ನಗರದಲ್ಲಿರುವ ಕಮಲ ರಂಜಿತ್ ಎಜುಕೇಷನ್ ಸೊಸೈಟಿ (ರಿ) ನ The Acme School ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಲೋಇ/59/ಬಿಇಡಿ/2019 ದಿನಾಂಕ 06/05/2022
2) ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಲೋಇ/59/ಬಿಇಡಿ/2019 ದಿನಾಂಕ 25/09/2024
3) ತಮ್ಮ ಮನವಿ ಪತ್ರ ದಿನಾಂಕ 02/09/2026
4) Vidyavardhaka College of Engineering, Mysuru ರವರ ಟೆಸ್ಟ್ ಮಾಡಿರುವ ಬಗ್ಗೆ ವರದಿ ದಿನಾಂಕ 31/08/2026

**********

ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರಿನ ನಿವೇದಿತ ನಗರದಲ್ಲಿರುವ ಕಮಲ ರಂಜಿತ್ ಎಜುಕೇಷನ್ ಸೊಸೈಟಿ (ರಿ) ನ The Acme School ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವಂತೆ ಉಲ್ಲೇಖ (3) ರಲ್ಲಿ ತಾವು ಕೋರಿರುತ್ತೀರಿ. ಅದರಂತೆ ದಿನಾಂಕ 03/09/2026 ರಂದು ಸದರಿ ಶಾಲಾ ಕಟ್ಟಡಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿರುತ್ತದೆ.

1. ಸದರಿ ಶಾಲಾ ಕಟ್ಟಡವು ನೆಲ+2 ಅಂತಸ್ತು ಕಟ್ಟಡವು ಆರ್.ಸಿ.ಸಿ. ಸ್ಲ್ಯಾಬ್, ಬೀಮ್‌ಗಳಿಂದ ನಿರ್ಮಿತವಾಗಿರುವ ಕಟ್ಟಡವಾಗಿರುತ್ತದೆ.
2. ಸದರಿ ಶಾಲಾ ಕಟ್ಟಡವು 2019ನೇ ವರ್ಷದಲ್ಲಿ ಪೂರ್ಣಗೊಂಡಿರುತ್ತದೆ. ಕಟ್ಟಡವು ಸುಸ್ಥಿತಿಯಲ್ಲಿರುವುದು ಕಂಡು ಬಂದಿರುತ್ತದೆ.
3. ಸದರಿ ಶಾಲಾ ಕಟ್ಟಡದಲ್ಲಿ ಒಟ್ಟು 15 ಕೊಠಡಿಗಳಿದ್ದು, ನರ್ಸರಿ, ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ನಡೆಸುತ್ತಿರುತ್ತಾರೆ.
4. ಸದರಿ ಶಾಲಾ ಕಟ್ಟಡದಲ್ಲಿ ವಿದ್ಯಾರ್ಥಿಗಳ ಹಾಗೂ ಶಿಕ್ಷಕರು ಬಳಕೆಗಾಗಿ ಅಗತ್ಯವಿರುವಷ್ಟು ಶೌಚಾಲಯದ ವ್ಯವಸ್ಥೆ ಇರುತ್ತದೆ.

ಮುಂದುವರೆದು Vidyavardhaka College of Engineering, Mysuru ರವರು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ ದಿನಾಂಕ 25/08/2026 ರಂದು ಸದರಿ ಕಟ್ಟಡದ Ultrasonic Pluse Velocity Test and Rebound hammer Test ಮಾಡಿ ಉಲ್ಲೇಖ (4) ರ ಪತ್ರದಲ್ಲಿ ವರದಿಯನ್ನು ನೀಡಿರುತ್ತಾರೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.

ಪು.ತಿ.ನೋ.,

**ಶಾಲಾ/ಕಾಲೇಜು ಆಡಳಿತ ಮಂಡಳಿಯು ಪಾಲಿಸಬೇಕಾದ ಕ್ರಮಗಳು:-**

1. ಸದರಿ ಶಾಲೆ/ಕಾಲೇಜುಗಳ ಕಟ್ಟಡವನ್ನು ಸೂಕ್ತ ದುರಸ್ಥಿಗಳೊಂದಿಗೆ ಪ್ರತಿ ವರ್ಷಕ್ಕೆ ನಿರ್ವಹಣೆ ಮಾಡಲು ಸೂಚಿಸಿದೆ.
2. ಸದರಿ ಶಾಲೆ/ಕಾಲೇಜುಗಳ ಛಾವಣಿ ಮೇಲೆ ಶೇಖರಣೆಯಾಗುವ ಕಸ ಕಡ್ಡಿಗಳನ್ನು ಪ್ರತಿ ಮಾಹೆಯಾನ ಕಾಲ ಕಾಲಕ್ಕೆ ಶುಚಿಗೊಳಿಸಲು ಸೂಚಿಸಿದೆ ನೀರಿನ ಸ್ಥಳಗಳನ್ನು ಶುಚಿಯಾಗಿಡಲು ಸೂಚಿಸಿದೆ.
3. ಸದರಿ ಶಾಲೆ/ಕಾಲೇಜುಗಳ ಕಟ್ಟಡದ ಆವರಣದಲ್ಲಿ ಸುರಕ್ಷಿತ ನಿಯಮಗಳನ್ನು ಅಳವಡಿಸಲು ಸೂಚಿಸಿದೆ.
4. ಸದರಿ ಸುರಕ್ಷತಾ ಪ್ರಮಾಣ ಪತ್ರದ ಅವಧಿಯಲ್ಲಿ ಶಾಲೆ/ಕಾಲೇಜುಗಳ ತರಗತಿಗಳನ್ನು ವಿಸ್ತರಿಸಿದರೆ ಪುನಃ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಲು ಸೂಚಿಸಿದೆ. ಶಾಲೆ/ಕಾಲೇಜುಗಳ ಕಟ್ಟಡದಲ್ಲಿ ಮೇಲಂತಸ್ಥಿನಲ್ಲಿ ಬದಲಾವಣೆಗಳನ್ನು ತರಲು ಬಯಸಿದರೆ ಮಕ್ಕಳ ಹಿತ ದೃಷ್ಟಿಯಿಂದ ತಾಂತ್ರಿಕ ನೆರವು ಪಡೆಯಲು ಸೂಚಿಸಿದೆ.
5. ಶಾಲೆ/ಕಾಲೇಜುಗಳ ಪರಿಮಿತಿಯನ್ನು ಶುಚಿಯಾಗಿ ಇಡುವುದು, ಶೌಚಾಲಯಗಳನ್ನು ಸ್ವಚ್ಛವಾಗಿ ಇಡುವುದು ಮತ್ತು ಮಳೆಯ ಸಂದರ್ಭಗಳಲ್ಲಿ ಛಾವಣಿಯಿಂದ ನೀರು ಸೋರದಂತೆ ಕ್ರಮ ವಹಿಸುವಂತೆ ತಿಳಿಸಿದೆ.
6. ಸದರಿ ಕಟ್ಟಡದ ಮೇಲ್ಛಾವಣಿಯಲ್ಲಿರುವ Dummy ಕಾಲಂಗಳ ಸರಳುಗಳನ್ನು ಕಾಂಕ್ರೀಟ್‌ನಿಂದ ಪೂರ್ಣವಾಗಿ ಮುಚ್ಚುವಂತೆ ಹಾಗೂ ಮೇಲ್ಛಾವಣಿಗೆ ವಾಟರ್ ಪ್ರೂಫಿಂಗ್ ಮಾಡುವಂತೆ ತಿಳಿಸಿದೆ.

ಕಾರ್ಯದರ್ಶಿಗಳು, ಕಮಲ ರಂಜಿತ್ ಎಜುಕೇಷನ್ ಸೊಸೈಟಿ (ರಿ), The Acme School, ಮೈಸೂರುರವರು ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಪ್ರಾಥಮಿಕ ಶಿಕ್ಷಣ ಇಲಾಖೆಯವರ ಸುತ್ತೋಲೆ ಸಂಖ್ಯೆ: ಇಡಿ/43/ಪಿಜಿಸಿ/2022 ದಿನಾಂಕ 18/05/2022 ಆದೇಶದಂತೆ ನಗರ ಪ್ರದೇಶದ ಶಾಲೆ/ಕಾಲೇಜು ಕಟ್ಟಡಗಳಿಗೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು The Assistant Executive Engineer, PWD No. 1 Speical Sub division, Mysuru ರವರ ಹೆಸರಿನಲ್ಲಿ ರೂ. 5,000/- ಗಳನ್ನು ದಿನಾಂಕ 04/09/2026 ರಂದು ಬ್ಯಾಂಕ್ ಆಫ್ ಬರೋಡಾ, ಮೈಸೂರು ಡಿ.ಡಿ. ಸಂಖ್ಯೆ: 003783 ರಲ್ಲಿ ಶುಲ್ಕವನ್ನು ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ಪರಿಗಣಿಸಿ ಹಾಗೂ ಕಟ್ಟಡವು "Structurally Stable" ಇರುವುದಾಗಿ ಕಂಡು ಬಂದಿರುತ್ತದೆ. ಆದ್ದರಿಂದ ಸದರಿ ಕಟ್ಟಡಕ್ಕೆ 5 ವರ್ಷಗಳ ಕಾಲಾವಧಿಗೆ ಅಂದರೆ 2026-27 ರಿಂದ 2030-31ನೇ ಸಾಲಿನವರೆಗೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ನಂ.1 ವಿಶೇಷ ಉಪವಿಭಾಗ,
ನಜರ್‌ಬಾದ್, ಮೈಸೂರು-570010.